# ‘ಕಾಳ’ನ ಕಾಲ!

ಅಂತೂ ‘ಕಾಳ’ ಬಿಡುಗಡೆ ಕಂಡಿದ್ದಾನೆ. (ತಮಿಳಿನಲ್ಲಿ ‘ಳ’ ಇಲ್ಲದಿರುವುದರಿಂದ ನೀವು ಕಾಲ ಎಂದೂ ಓದಿಕೊಳ್ಳಬಹುದು!) ಸಾಮಾನ್ಯವಾಗಿ ರಜನಿಕಾಂತ್ ಸಿನಿಮಾ, ಬಿಡುಗಡೆಯಾಗುವ ಒಂದು ವಾರ ಮುನ್ನವೇ ‘ಹೈಪ್’ ಸೃಷ್ಟಿಯಾಗುವುದಿದೆ. ಆದರೆ ‘ಕಾಳ’ನಿಗೆ ಅಂತಹ ಯಾವ ‘ಪ್ರಚಾರೋದ್ವೇಗ’ಗಳೂ ಸೃಷ್ಟಿಯಾಗದೆ, ಶಾಂತವಾಗಿ ತೆರೆಗೆ ಬಂದಿದ್ದಾನೆ. ಕರ್ನಾಟಕದಲ್ಲಿ ಮೊದಲ ದಿನ ಕನ್ನಡಾಭಿಮಾನಿಗಳ ಬೆದರಿಕೆ ಎದುರಿಸಿದರೂ, ಬಳಿಕ ಚಿತ್ರ ತೆರೆ ಕಂಡಿದೆ.

ಹಾಗೆಂದು ‘ಕಾಳ’ ನ ಕಲೆಕ್ಷನ್ ಏನೂ ಕಡಿಮೆಯಿಲ್ಲ. ಬಿಡುಗಡೆಗೆ ಮುನ್ನವೇ 230 ಕೋಟಿ ರೂಪಾಯಿ ಕಲೆಕ್ಷನ್ ಕಂಡಿದ್ದಾನೆ. ತಮಿಳ್ನಾಡಿನ ಥಿಯೇಟರ್ ಬಿಡುಗಡೆಯ ಮಾರಾಟ ಮೊತ್ತವೇ 60 ಕೋಟಿ ರೂಪಾಯಿ ದಾಟಿದೆ. ವಿದೇಶಗಳಲ್ಲಿ 45 ಕೋಟಿಗೆ ಮಾರಾಟವಾಗಿದ್ದರೆ, ಆಂಧ್ರದಲ್ಲಿ 33 ಕೋಟಿಗೆ! ಸುಮಾರು 70 ಕೋಟಿ ರೂಪಾಯಿ ಉಪಗ್ರಹ ಪ್ರಸಾರ ಹಕ್ಕುಗಳಿಂದ ಬಂದಿದೆ. ಸಂಗೀತ ಕೂಡಾ 5 ಕೋಟಿ ರೂಪಾಯಿ ತಂದು ಕೊಟ್ಟಿದೆ. ಆರಂಭಿಕ ‘ಹೈಪ್’ ಇಲ್ಲದಿದ್ದರೂ ಮೊದಲ ದಿನ ‘ಕಾಳ’ 1.76 ಕೋಟಿ ರೂಪಾಯಿ ಗಳಿಸಿ ದಾಖಲೆ ನಿರ್ಮಿಸಿದ್ದಾನೆ. ಮೊದಲ ವಾರದ ಕಲೆಕ್ಷನ್ ಕೂಡಾ ಸಖತ್ತಾಗಿದೆ. ಅಷ್ಟರ ಮಟ್ಟಿಗೆ ರಜನಿ ಈಗಲೂ ‘ತಮಿಳು ಬೆಳ್ಳಿತೆರೆಯ ರಾಷ್ಟ್ರೀಯ ಮ್ಯಾಜಿಷಿಯನ್’ ಆಗಿ ಉಳಿದುಕೊಂಡಿದ್ದಾರೆ.

ತಮಿಳುನಾಡಿನ ಸಣ್ಣ ಹಳ್ಳಿಯೊಂದರಿಂದ ಮುಂಬೈಯ ಧಾರಾವಿ ಕೊಳೆಗೇರಿಗೆ ವಲಸೆ ಹೋಗಿ, ಅಲ್ಲೇ ಬೆಳೆದು ನಿಂತು ದಮನಿತರ ಹಕ್ಕಿಗಾಗಿ ಹೋರಾಡುವ ಸೂಪರ್ ಹೀರೋ ಕಥೆಯಿದು. ಆದರೆ ರಜನಿಯ ಈ ಹಿಂದಿನ ಸಿನಿಮಾಗಳಂತೆ ಇಲ್ಲಿ ಹೀರೋನ ಅತಿಮಾನುಷ ಸಂಭ್ರಮಗಳಿಲ್ಲ. ಸಾಧ್ಯವಾದಷ್ಟು ವಾಸ್ತವದ ನೆಲೆಗಟ್ಟಿನಲ್ಲಿ ಕಥೆ ಹೆಣೆಯಲಾಗಿದೆ. ರಜನಿಯ ಹಿಂದಿನ ಚಿತ್ರ ‘ಕಬಾಲಿ’ ನಿರ್ದೇಶಿಸಿದ ಪಾ.ರಂಜಿತ್, ಈ ಸಿನಿಮಾದಲ್ಲೂ ರಜನಿಯ ಎತ್ತರದ ಇಮೇಜ್‌ಗೆ ತಕ್ಕಂತೆ ನಿರೂಪಣೆ ಮಾಡಿರುವುದು ವಿಶೇಷ. ಹೀರೋಗೆ ಸವಾಲೊಡ್ಡುವ ಹೀರೋಯಿನ್‌ಗಳು ವಿಲ್ಲನ್ ಆಗುವುದು ರಜನಿಯ ಹಿಂದಿನ ಸಿನಿಮಾಗಳ ವಿಶೇಷವಾದರೆ; ಇಲ್ಲಿ ಅದಕ್ಕೆ ತದ್ವಿರುದ್ಧ. ಹೀರೋಗೆ ಸವಾಲೊಡ್ಡಿಯೂ ಹೀರೋನನ್ನು ಪ್ರೀತಿಸುವ ಹೀರೋಯಿನ್ ಪಾತ್ರ.

1987ರ ಕೊನೆಯಲ್ಲಿ ಇಂತಹದ್ದೇ ಒಂದು ಕೊಳೆಗೇರಿ ಪಾತ್ರವನ್ನು ‘ನಾಯಗನ್’ ಮೂಲಕ ಕಮಲಹಾಸನ್ ಅದ್ಭುತವಾಗಿ ನಿರ್ವಹಿಸಿದ್ದು ನೆನಪಾಗುತ್ತದೆ. ಅದು ತಮಿಳುನಾಡಿನಿಂದ ಮುಂಬೈಗೆ ಹೋಗಿ ಭೂಗತ ದೊರೆಯಾಗಿ ಬೆಳೆದುನಿಂತ ವರದರಾಜ ಮೊದಲಿಯಾರ್ ಎಂಬಾತನ ಜೀವನಕಥೆ. ಮಣಿರತ್ನಂ ನಿರ್ದೇಶಿಸಿದ ಆ ಚಿತ್ರ ಕಲೆಕ್ಷನ್‌ನಲ್ಲಿ ದಾಖಲೆ ಬರೆದಿತ್ತು. ಆದರೆ ತಮಿಳು ಚಿತ್ರರಂಗದ ಎರಡು ಕಣ್ಣುಗಳಂತೆ ಇರುವ ರಜನಿ ಮತ್ತು ಕಮಲ್ ಇಬ್ಬರ ಸಿನಿಮಾಗಳೂ ಸಾಗುವ ಸಮಾನಾಂತರ ರೇಖೆಗಳು ಅಚ್ಚರಿ ಹುಟ್ಟಿಸುವಂತಿವೆ. ಕಥೆ ಒಂದೇ ತರಹ ಇದ್ದರೂ, ಇಬ್ಬರ ಸಿನಿಮಾಗಳ ನಿರೂಪಣೆ ಅತ್ಯಂತ ಭಿನ್ನ. ಅಭಿಮಾನಿಗಳೂ ಭಿನ್ನ. ಆದರೆ, ರಜನಿಯವರ ರಾಜಕೀಯ ಪಕ್ಷ ಬೆಳೆಸಲು ಬೇಕಾದ ರಸಗೊಬ್ಬರ ಒದಗಿಸುವ ಎಲ್ಲ ಅಂಶಗಳೂ ‘ಕಾಳ’ದಲ್ಲಿವೆ ಎನ್ನುವುದು ನಿಸ್ಸಂಶಯ.

‘ಕಾಳ’ ಬಿಡುಗಡೆಯ ಬೆನ್ನಲ್ಲೇ ರಜನಿ ಮುಂದಿನ ಚಿತ್ರದ ಶೂಟಿಂಗ್ ಆರಂಭಿಸಲು ಡೆಹ್ರಾಡೂನ್‌ಗೆ ತೆರಳಿದ್ದಾರೆ. ಕಾರ್ತಿಕ್ ಸುಬ್ಬರಾಜ್ ನಿರ್ದೇಶನದ ಈ ಹೊಸ ಚಿತ್ರ, ರಜನಿಯವರ ವೃತ್ತಿಜೀವನದ 165ನೇ ಚಿತ್ರ. ವಿಜಯ್ ಸೇತುಪತಿ ಸಹಿತ ಭಾರೀ ತಾರಾಗಣವಿದೆ. ರಜನಿ ಎಂಬ ಬೆಳ್ಳಿತೆರೆಯ ಮಾಂತ್ರಿಕನ ಮೋಡಿ ಈಗಲೂ ಕರಗಿಲ್ಲ ಎನ್ನುವುದಂತೂ ನಿಜ.

■ ಬಿಂದು

